ಅಧ್ಯಕ್ಷರು: ಮಾನ್ಯ ಮಂತ್ರಿಗಳು ಅದನ್ನೇ ಹೇಳಿದರು. ಇನ್ನು ಮೇಲೆ ಕೊಡುತ್ತಾರೆ. ಈಗ ಬಜೆಟ್ ಅನೌನ್ಸ್ ಆಗಿದ್ದು ಇನ್ನು ಮೇಲೆ ಬರುತ್ತದೆ. ಸಾಕು ಬಿಡಿ.

ಶ್ರೀ ಎನ್. ಸಂಪಂಗಿ: ನಂಜುಂಡಪ್ಪರವರ ವರದಿಯ ಪ್ರಕಾರವಾಗಿ ಸೇರಿಸಿದ್ದಾರೆ ಅದರೆ ಗುಡಿಬಂಡೆ ತಾಲ್ಲೂಕನ್ನು ಸೇರಿಸಿಲ್ಲ ದಯವಿಟ್ಟು ಗುಡಿಬಂಡೆ ತಾಲ್ಲೂಕನ್ನು ಸೇರಿಸಿ.

ಅಧ್ಯಕ್ಷರು: ನಂಜುಂಡಪ್ಪರವರ ವರದಿಯಲ್ಲಿ ಹಿಂದುಳಿದ ತಾಲ್ಲೂಕುಗಳು ಮತ್ತು ಅತಿ ಹಿಂದುಳಿದ ತಾಲ್ಲೂಕುಗಳು ಎಂದು ಸೇರಿವೆ. ಈಗೇನು ಮಾನ್ಯ ಮುಖ್ಯಮಂತ್ರಿಗಳು ಅನೌನ್ಸ್ ಮಾಡಿದ್ದಾರೆ ಅದರಲ್ಲಿ ವಿಶೇಷವಾದ ಅನುದಾನ ನಿಮ್ಮ ತಾಲ್ಲೂಕುಗಳಿಗೆ ಸಿಗುತ್ತದೆ. ಇಲ್ಲಿಗೆ ಮುಗಿಸಿ ಬಿಡಿ. ಮುಂದಿನ ಪ್ರಶ್ನೆಗೆ ಹೋಗೋಣ.

ಡಾ: ಎಂ. ಸುಧಾಕರ್: ಇದು ಬಹಳ ಮುಖ್ಯವಾದ ವಿಚಾರ. ಮಾನ್ಯ ಮಂತ್ರಿಗಳು ಬಹಳಷ್ಟು ಹಣ ಕೊಟ್ಟಿದ್ದೇವೆಂದು ಹೇಳುತ್ತಿದ್ದಾರೆ. ನಾನೇಕೆ ಬಾಗೇಪಲ್ಲಿಯ ವಿಚಾರದ ಬಗ್ಗೆ ಮಾತನಾಡುತ್ತೇನೆಂದರೆ, ಕಳೆದ ಬಾರಿ ನಮ್ಮ ಕ್ಷೇತ್ರಕ್ಕೆ ಸೇರಿದಂಥ ಒಂದು ಹೋಬಳಿ ಈಗ ಬಾಗೇಪಲ್ಲಿಗೆ ಸೇರುತ್ತದೆ.

ಅಧ್ಯಕ್ಷರು: ನೋಡಿ ಆ ಕ್ಷೇತ್ರಕ್ಕೆ ಸೀಮಿತವಾಗಿ ಮಾತ್ರ ಪ್ರಶ್ನೆ ಕೇಳಿಬಿಡಿ.

ಡಾ: ಎಂ. ಸುಧಾಕರ್: ಅಲ್ಲಿ ಈಗ ಬಹಳಷ್ಟು ಹಣ ಪೋಲಾಗುತ್ತದೆ. ಜಿಲ್ಲಾ ಪಂಚಾಯಿತಿಗಳಲ್ಲಿ ಸಮರ್ಪಕವಾಗಿ ಕೆಲಸಗಳು ಆಗುತ್ತಿಲ್ಲ. ದಯವಿಟ್ಟು ಅದನ್ನು ಬಹಳ ಗಂಭೀರವಾಗಿ ಪರಿಗಣಿಸಬೇಕು. ಮಾನ್ಯ ಮಂತ್ರಿಗಳಲ್ಲಿ ವಿನಂತಿಸುವುದೇನೆಂದರೆ, ಕಳೆದ 2–3 ವರ್ಷಗಳಿಂದ ಎಷ್ಟು ಹಣ ಕೊಟ್ಟಿದ್ದೀರಾ ಅದರ ಬಗ್ಗೆ ಸಮಗ್ರವಾದ ತನಿಖೆ ಮಾಡಿ, ಬೇಕಾದರೆ ಲಿಂಕ್ ಡಾಕ್ಯುಮೆಂಟ್ ಇದ್ದರೆ ಅದನ್ನು ದಯವಿಟ್ಟು ತೆಗೆದುಬಿಡಿ. ಅಲ್ಲಿ ಬಹಳ ಹಣ ಪೋಲಾಗುತ್ತಿದೆ. ಇದರ ಬಗ್ಗೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು.

ಅಧ್ಯಕ್ಷರು: ಅದರ ಬಗ್ಗೆ ವಿಚಾರಣೆ ಮಾಡಿ.

ಶ್ರೀಮತಿ ಶೋಭಾ ಕರಂದ್ಲಾಜೆ: ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

ಹೊಸದಾಗಿ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವುದು ಹಾಗು ಮೇಲ್ದರ್ಜೆಗೇರಿಸುವುದು

26 (13) ಶ್ರೀ ಸಂಗಮೇಶ್ವರ ಬಿ.ಕೆ. (ಭದ್ರಾವತಿ) :– ಮಾನ್ಯ ಪಶುಸಂಗೋಪನಾ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) 4 ಲಕ್ಷ ಜನಸಂಖ್ಯೆ ಹೊಂದಿರುವ ಭದ್ರಾವತಿ ಕ್ಷೇತ್ರದಲ್ಲಿ ಹೆಚ್ಚು ರೈತರು ವಾಸವಾಗಿದ್ದು, ಹೆಚ್ಚಿಗೆ ಕೃಷಿ ಹಾಗೂ ಜಾನುವಾರುಗಳನ್ನು ಹೊಂದಿರುವ ವಿಚಾರವು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ರೈತರ ಹಾಗೂ ಜಾನುವಾರುಗಳ ಹಿತದೃಷ್ಟಿಯಿಂದ ಹೊಸದಾಗಿ ಪಶು ಆಸ್ಪತ್ರೆಗಳನ್ನು ಮಂಜೂರು ಮಾಡುವ ಆಲೋಚನೆ ಏನಾದರೂ ಸರ್ಕಾರಕ್ಕಿದೆಯೇ;

(ಇ) ಈಗಾಗಲೇ ಪಶು ಆಸ್ಪತ್ರೆಗಳು ಇದ್ದು, ಈ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದಕ್ಕೆ ಪ್ರಸ್ತಾಪ ಮಾಡಿದ್ದರೂ ಸಹ ಮೇಲ್ದಜೇಗೇರಿಸದಿರಲು ಕಾರಣವೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನಾ) ಸಚಿವರು :

(ಅ) ಹೌದು, ಸರ್ಕಾರದ ಗಮನಕ್ಕೆ ಬಂದಿದೆ.

ಭದ್ರಾವತಿ ಮತಕ್ಷೇತ್ರದಲ್ಲಿ ಒಟ್ಟು 2,47,297 ವಿವಿಧ ಜಾನುವಾರುಗಳು ಇವೆ. ಅವುಗಳ ವಿವರ ಈ ಕೆಳಗಿನಂತಿವೆ.

ದನಗಳು	65,717
ಎಮ್ಮೆ	78,527
ಕುರಿ	5,838
ಮೇಕೆ	8,958
ಹಂದಿಗಳು	353
ಕೋಳಿಗಳು	87,904
ಒಟ್ಟು	2,47,297

(ಆ) ಡಾ: ಡಿ.ಎಂ. ನಂಜುಂಡಪ್ಪರವರ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಶಿಫಾರಸ್ಸಿನಂತೆ ಹಿಂದುಳಿದ ಹಾಗೂ ಅತೀ ಹಿಂದುಳಿದ ತಾಲ್ಲೂಕುಗಳಲ್ಲಿ ಅವಶ್ಯಕತೆಯಿರುವ ಕಡೆ ಪಶುಚಿಕಿತ್ಸಾಲಯಗಳನ್ನು ತೆರೆಯಲು ಕ್ರಮವಹಿಸಿದ್ದು, ಇದನ್ನು 8 ವರ್ಷಗಳಲ್ಲಿ ಅನುಷ್ಠಾನಗೊಳಿಸಲು ಸರ್ಕಾರ ಕ್ರಮ ವಹಿಸಿದೆ.

ಭದ್ರಾವತಿ ತಾಲ್ಲೂಕು ಮುಂದುವರೆದ ತಾಲ್ಲೂಕು ಆಗಿದ್ದು, ಅಲ್ಲಿ ಒಟ್ಟು 2,47,297 ಜಾನುವಾರುಗಳಿದ್ದು, ಇವುಗಳನ್ನು ಜಾನುವಾರು ಘಟಕಕ್ಕೆ ಪರಿವರ್ತಿಸಿದಾಗ 1,46,776 ಜಾನುವಾರು ಘಟಕಗಳಾಗುತ್ತವೆ. ರಾಷ್ಟ್ರೀಯ ಕೃಷಿ ಆಯೋಗದ 1976ರ ಶಿಫಾರಸ್ಸಿನ ಅನ್ವಯ ಪ್ರತಿ 5,000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯ ಇರಬೇಕಾಗಿರುತ್ತದೆ. ಭದ್ರಾವತಿ ತಾಲ್ಲೂಕಿನ 1,46,776 ಜಾನುವಾರು ಘಟಕಗಳಿಗೆ 29 ಪಶು ಚಿಕಿತ್ಸಾಲಯಗಳ ಅವಶ್ಯಕತೆಯಿದ್ದು, ಹಾಲಿ 22 ಪಶುವೈದ್ಯ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, 7 ಪಶುವೈದ್ಯ ಸಂಸ್ಥೆಗಳ ಕೊರತೆ ಇದೆ.

ಈ ಹಿನ್ನೆಲೆಯಲ್ಲಿ, 2006–07ರಲ್ಲಿ ಒಂದು ಪಶುಚಿಕಿತ್ಸಾಲಯ ಮುಂಗೋಟ ಗ್ರಾಮದಲ್ಲಿ ಹಾಗೂ 2007–08ರಲ್ಲಿ ಒಂದು ಪಶುಚಿಕಿತ್ಸಾಲಯವನ್ನು ಕುರುಬರ ವಿಠಲಾಪುರದಲ್ಲಿ ಮಂಜೂರು ಮಾಡಿದೆ. ಪ್ರಸ್ತುತ ಕೊರತೆಯಿರುವ 7 ಪಶುಚಿಕಿತ್ಸಾಲಯ ತೆರೆಯಲು ಈ ಕೆಳಕಂಡ ಗ್ರಾಮಗಳಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ.

1)	ಕಲ್ಲಹಳ್ಳಿ
2)	ಹಿರಿಯೂರು
3)	ದೊಡ್ಡೇರಿ
4)	ತಟ್ಟೆಹಳ್ಳಿ
5)	ಮೈದೊಳಲು
6)	ಮಾಹಿತಿಕೆರೆ
7)	ಮಾರಶೆಟ್ಟಿಹಳ್ಳಿ
8)	ವಿರಾಪುರ

ಅವಶ್ಯಕತೆಗೆ ಅನುಗುಣವಾಗಿ, ಪಶುವೈದ್ಯಕೀಯ ಪದವೀಧರರ ಲಭ್ಯತೆ ಮೇಲೆ ಹೊಸ ಪಶುಚಿಕಿತ್ಸಾಲಯಗಳನ್ನು Norms ಪ್ರಕಾರ ಹಂತಹಂತವಾಗಿ ತೆರೆಯುವ ಪ್ರಕ್ರಿಯೆ ಪರಿಶೀಲನೆಯಲ್ಲಿದೆ.

(ಇ) ಉತ್ತಮ ಗುಣಮಟ್ಟದ ತಾಂತ್ರಿಕ ಪಶುವೈದ್ಯ ಸೇವೆ ಒದಗಿಸಲು ಎಲ್ಲಾ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುವೈದ್ಯಾಧಿಕಾರಿ ಹುದ್ದೆಯಿರುವ ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸುವ ಕಾರ್ಯಕ್ರಮ ಇಲಾಖೆಯಲ್ಲಿ ಜಾರಿಯಲ್ಲಿವೆ. ಈ ಮೇಲ್ದರ್ಜೆಗೇರಿಸುವ ಕಾರ್ಯಕ್ರಮವನ್ನು ಪದವೀಧರ ಪಶುವೈದ್ಯರ ಲಭ್ಯತೆಗೆ ಅನುಗುಣವಾಗಿ ಹಂತಹಂತವಾಗಿ ಮಾಡಲಾಗುತ್ತಿದೆ.

2001–02ನೇ ಸಾಲಿನಿಂದ 2007–08ನೇ ಸಾಲಿನ ವರೆಗೆ ರಾಜ್ಯದಲ್ಲಿ ಒಟ್ಟಾರೆ 897 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರ ಮತ್ತು ಕೃತಕ ಗರ್ಭಧಾರಣಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ. ಇವುಗಳಲ್ಲಿ, ಭದ್ರಾವತಿ ತಾಲ್ಲೂಕಿನ 8 ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಈಗಾಗಲೇ ಮೇಲ್ದರ್ಜೆಗೇರಿಸಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ.

ವರ್ಷ	ಸ್ಥಳ
2000–01	ಅನವೇರಿ
2001–02	ಸಿಂಗನಮನೆ, ಅರಳಿಕೊಪ್ಪ
2002–03	ಅಂತರಗಂಗೆ, ಹುಣಸೆಕಟ್ಟೆ, ತಳ್ಳಿಕಟ್ಟೆ
2005–06	ದಡಮಘಟ್ಟ
2006–07	ಬಾರಂದೂರು

ಭದ್ರಾವತಿ ಕ್ಷೇತ್ರದಲ್ಲಿ, ಇನ್ನುಳಿದ ಆರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳನ್ನು ಪಶುಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆಗೇರಿಸಲು ಬಾಕಿಯಿದ್ದು, ಪಶುವೈದ್ಯ ಪದವೀಧರರ ಲಭ್ಯತೆಯ ಮೇಲೆ ಹಂತಹಂತವಾಗಿ ಮೇಲ್ದರ್ಜೆಗೇರಿಸಲು ಕ್ರಮವಹಿಸಲಾಗುತ್ತಿದೆ.

ಪಶುಆಸ್ಪತ್ರೆಗಳನ್ನಾಗಿ ಮೇಲ್ದರ್ಜೆಗೇರಿಸಲು ಕೂಡ್ಲಿಗೆರೆ, ಅನವೇರಿ, ಸಿಂಗನಮನೆ ಮತ್ತು ಹನುಮಂತಾಪುರ ಪಶುಚಿಕಿತ್ಸಾಲಯಗಳಿಂದ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಶ್ರೀ ಬಿ.ಕೆ. ಸಂಗಮೇಶ್ವರ: ನಮ್ಮ ಪಶು ಸಂಗೋಪನಾ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಆದರೆ, ರಾಷ್ಟ್ರೀಯ ಕೃಷಿ ಆಯೋಗದ 1976 ರ ಶಿಫಾರಸ್ಸಿನ ಅನ್ವಯ ಪ್ರತಿ

5000 ಜಾನುವಾರುಗಳಿದ್ದರೆ, ಅಲ್ಲಿ ಒಂದು ಆಸ್ಪತ್ರೆ ಘಟಕವನ್ನು ಪ್ರಾರಂಭಿಸಬೇಕೆಂದು ಇದೆ. ಆದರೆ, ನಮ್ಮ ಭದ್ರಾವತಿ ತಾಲ್ಲೂಕಿನಲ್ಲಿ 1,46,776 ಜಾನುವಾರುಗಳಿದ್ದರೂ ಕೂಡ ಕೇವಲ 22 ಪಶು ವೈದ್ಯ ಆಸ್ಪತ್ರೆಗಳು ಮಾತ್ರ ಇವೆ. ಇನ್ನೂ 7 ಆಗಬೇಕಾಗಿದೆ. ಆದರೆ, 2006–07 ಮತ್ತು 2007–08 ನೇ ಸಾಲಿನಲ್ಲಿ ನಮ್ಮ ಶಿವಮೊಗ್ಗ ಗ್ರಾಮಾಂತರ ಕ್ಷೇತ್ರಕ್ಕೆ ಮುಂಗೋಟಿ ಮತ್ತು ಕುರುಬರ ವಿಠಲಾಪುರಕ್ಕೆ ಹೊಸ ಆಸ್ಪತ್ರೆ ಮಾಡಿದ್ದಾರೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿ ಒಂದು ಹೊಸ ಆಸ್ಪತ್ರೆಯನ್ನು ಹೊಸದಾಗಿ ಮಂಜೂರು ಮಾಡಿಲ್ಲ. ದಯವಿಟ್ಟು ನನ್ನ ಕ್ಷೇತ್ರದ ವ್ಯಾಪ್ತಿಗೆ ಕಲ್ಲಹಳ್ಳಿ, ಹಿರಿಯೂರು, ದೊಡ್ಡೇರಿ, ವೀರಾಪುರ, ನಾಲ್ಕು ಕಡೆ ಜಾನುವಾರು ಜಾಸ್ತಿಯಿರುವುದರಿಂದ ಇಲ್ಲಿ ಪಶು ಆಸ್ಪತ್ರೆ ಮಾಡಬೇಕಾಗಿದೆ. 5 ಸಾವಿರ ಜಾನುವಾರುಗಳಿಗೆ ಒಂದು ಘಟಕವನ್ನು ಮಾಡಬೇಕೆಂದು ಏನು ಇದೆ ಅದರನ್ವಯ ನನ್ನ ಕ್ಷೇತ್ರದಲ್ಲಿ ನಾಲ್ಕು ಘಟಕಗಳನ್ನು ಮಾಡಬೇಕು. ಇದಲ್ಲದೆ ನನ್ನ ಕ್ಷೇತ್ರದ ಸಿಂಗನ ಮನೆ ಮತ್ತು ಮತ್ತೊಂದು ಕಡೆ ಈ ಎರಡು ಕಡೆ ಮೇಲ್ದರ್ಜೆಗೇರಿಸಬೇಕೆಂದು ಮಂತ್ರಿಗಳಲ್ಲಿ ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತಾ, ತಾವು ಕೆಲವು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಿದರೂ ಅಲ್ಲಿ ಸಿಬ್ಬಂದಿ ಕೊರತೆ ಇದೆ. ವೈದ್ಯರ ಕೊರತೆ ಇದೆ. ಔಷಧಿಗಳ ಕೊರತೆ ಇದೆ. ಅಲ್ಲಿ ಸಿಬ್ಬಂದಿ ಉಳಿಯಲಿಕ್ಕೆ quarters ಇಲ್ಲ. ಅವರು ಎಲ್ಲಿಂದಲೋ ಬರುತ್ತಾರೆ. ಬೆಳಿಗ್ಗೆ ಬರುವ ತನಕ ರೈತರಿಗೆ, ಜಾನುವಾರುಗಳಿಗೆ ತೊಂದರೆಯಾಗುತ್ತದೆ. ಆದುದರಿಂದ ತಾವು ದಯವಿಟ್ಟು ಅನುಕೂಲವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ರೇವೂ ನಾಯಕ್ ಬೆಳಮಗಿ: (ಪಶುಸಂಗೋಪನಾ ಸಚಿವರು) ಸನ್ಮಾನ್ಯ ಅಧ್ಯಕ್ಷರೆ, ಗೌರವಾನ್ವಿತ ಸದಸ್ಯರು ಬಹಳ ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ಏಕೆಂದರೆ, ಹೊಸ ಪಶು ಆಸ್ಪತ್ರೆಗಳನ್ನು ಮಾಡಬೇಕಾದರೆ ನಂಜುಂಡಪ್ಪ ವರದಿ ಆಧಾರದ ಅನುಸಾರ 8 ವರ್ಷಗಳಲ್ಲಿ 318 ಹೊಸ ಪಶು ಆಸ್ಪತ್ರೆಗಳನ್ನು ತೆರೆಯಬೇಕೆಂದು ಮಂಡನೆ ಮಾಡಿದೆ. ಎರಡು ವರ್ಷಗಳಲ್ಲಿ ಈಗಾಗಲೇ 229 ಪಶು ಚಿಕಿತ್ಸಾಲಯಗಳಾಗಿವೆ. ಕೇವಲ 87 ಹೊಸ ಆಸ್ಪತ್ರೆಗಳನ್ನು ಹೊಸದಾಗಿ ಮಾಡಬೇಕೆಂದು ನಂಜುಂಡಪ್ಪ ವರದಿಯಲ್ಲಿದೆ. ಆದರೆ, ಭಾದ್ರಾವತಿ ತಾಲ್ಲೂಕು ಹಿಂದುಳಿದ ತಾಲ್ಲೂಕಿನಲ್ಲಿ ಇಲ್ಲ. ಮಾನ್ಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಹಾಕಿದ್ದಾರೆ. ಮೂಕ ಪ್ರಾಣಿಗಳ ಸೇವೆಯನ್ನು ಮಾಡಬೇಕೆಂದು ಅವರು ಚಿಂತನೆ ಮಾಡಿದ್ದಾರೆ. ನಾನು ಕೂಡ ಅದನ್ನು ಚಿಂತನೆ ಮಾಡುತ್ತಿದ್ದೇನೆ. ಅಲ್ಲಿ 2,47,787 ಜಾನುವಾರುಗಳಿವೆ ಎಂದು ಅಂಕಿ–ಸಂಖ್ಯೆಗಳಿವೆ. ಆದರೆ ಅವರು ಕೃಷಿ ನೀತಿ ಪ್ರಕಾರ 5 ಸಾವಿರ ಘಟ್ಟಕ್ಕೆ ಒಂದು ಹೊಸ ಆಸ್ಪತ್ರೆಯನ್ನು ತೆರೆಯಬೇಕೆಂದು, ಕೇಂದ್ರ ಮಾರ್ಗಸೂಚಿ ಪ್ರಕಾರ ಇನ್ನೂ

7 ಆಸ್ಪತ್ರೆಗಳು ಅವರ ಕ್ಷೇತ್ರದಲ್ಲಿ ಆಗಬೇಕೆಂದು ನಮ್ಮ ಗಮನಕ್ಕೆ ತಂದಿದ್ದಾರೆ. ನಾನು ಹಂತ ಹಂತವಾಗಿ ಆದ್ಯತೆ ಕೊಡುವುದಾಗಿ ಹಾಗೂ ಅವುಗಳನ್ನು ಮೇಲ್ದಜೇಗೇರಿಸುವುದಾಗಿ ತಮ್ಮ ಮುಖಾಂತರ ಭರವಸೆ ಕೊಡುತ್ತೇನೆ.

ಕುಡಿಯುವ ನೀರು ಒದಗಿಸುವುದು

27 (149) ಶ್ರೀ ಜಯಚಂದ್ರ ಟಿ.ಬಿ. (ಸಿರಾ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ತುಮಕೂರು ಜಿಲ್ಲೆ, ಶಿರಾ ತಾಲ್ಲೂಕು, ಮದಲೂರು ಕೆರೆಗೆ ಕುಡಿಯುವ ನೀರು ಹರಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ; ಹಾಗಿದ್ದರೆ ಯಾವ ಮೂಲದಿಂದ ಹಾಗೂ ಎಷ್ಟು ಪ್ರಮಾಣದ ನೀರು ಹರಿಸಲು ಉದ್ದೇಶಿಸಲಾಗಿದೆ;

(ಆ) ಯಾವ ಕೆರೆಯಿಂದ ಮದಲೂರು ಕೆರೆಗೆ ನೀರು ಹರಿಸಲಾಗುತ್ತದೆ ಇದಕ್ಕೆ ಸಂಬಂಧಿಸಿದ ಸರ್ವೇ ಕಾರ್ಯ ಆಗಿದೆಯೇ ಅಥವಾ ಮಂಜೂರಾತಿ ದೊರೆತಿದೆಯೇ;

(ಇ) ಮೇಲ್ಕಂಡ ಕ್ರಮ ಸಂಖ್ಯೆ 1 ಮತ್ತು 2ಅನ್ನು ಅನುಸರಿಸಿ ಅಂದಾಜು ಪಟ್ಟಿ ತಯಾರಿಸಲಾಗಿದೆಯೇ; ಹಾಗಿದ್ದರೆ ಇದಕ್ಕೆ ಮಂಜೂರಾತಿ ದೊರೆತಿದೆಯೇ;

(ಈ) ಯಾವ ಮೂಲದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

(ಉ) ಈ ಯೋಜನೆಯ ಅನುಷ್ಠಾನಕ್ಕಾಗಿ ಸರ್ಕಾರ ಯಾವುದಾದರೂ ಆದೇಶ ಹೊರಡಿಸಿದೆಯೇ?

ಶ್ರೀಮತಿ ಶೋಭಾ ಕರಂದ್ಲಾಜೆ (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

(ಆ)(ಆ) ಹೌದು ರೂ.700 ಲಕ್ಷ ಅಂದಾಜಿನ ರೇಖಾ ಅಂದಾಜು ಪ್ರಸ್ತಾಪಿಸಲಾಗಿದೆ. ಕಳ್ಳಂಬೆಳ್ಳಾ ಕೆರೆಯಿಂದ ವಾರ್ಷಿಕ 24.03Mcft ಹೆಚ್ಚುವರಿ ನೀರನ್ನು ಮದಲೂರು ಕೆರೆಗೆ ಫೀಡರ್ ಚಾನಲ್ ನಿರ್ಮಿಸಿ ಮದಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಿಗೆ ಅಗತ್ಯವಿರುವ ನೀರನ್ನು ಶುದ್ಧೀಕರಿಸಿ ಸರಬರಾಜು ಮಾಡಲು ಉದ್ದೇಶಿಸಿದೆ. ಅನುಮೋದಿತ ತಜ್ಞ ಸಂಸ್ಥೆಗೆ ಸರ್ವೇ ಕಾರ್ಯವಹಿಸಲಾಗಿದೆ.

(ಇ)(ಈ)(ಉ) ವಿವರಣಾತ್ಮಕ ಅಂದಾಜು ಪಟ್ಟಿಯನ್ನು ಸರ್ವೇ ಮತ್ತು ಯೋಜನಾ ವರದಿ ಆಧರಿಸಿ ತಯಾರಿಸಬೇಕಾಗಿದೆ. ಈ ಯೋಜನೆ ಅಂದಾಜು ಪಟ್ಟಿ ಸಿದ್ಧಪಡಿಸಿದ ನಂತರ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಲು ಪರಿಶೀಲಿಸಲಾಗುವುದು.